ಕಾವೇರಿಗಾರಿಯನ್ನು ೧೯೭೭-೮೮ರ ಕಾರ್ಯಕ್ರಮದ ಯೋಜನೆಯಲ್ಲಿ ಸೇರಿಸಲು ಪ್ರಯತ್ನಿಸಲಾಗುವುದು,

(ಆ) ಈ ಕೆಲಸಗಳಿಗೆ ಅಂದಾಜು ಪಟ್ಟಿಗಳು ತಯಾರಾಗುತ್ತಿದ್ದು, ಅವುಗಳಿಗೆ ಅನುಮೋದನೆ ದೊರೆತ ಮೇಲೆ ಕೈಗೆತ್ತಿಕೊಳ್ಳಲಾಗುವುದು.

ಕೃಷಿ ಸಹಾಯಕರ ಹುದ್ದೆಗೆ ಆಯ್ಕೆ ವಿಧಾನದ ಬಗ್ಗೆ

೨೨೭ ಶ್ರೀ ಜಿ.ಎಸ್. ಆಚಾರ್ (ಬೈಂದೂರು).—ಮಾನ್ಯ ಕೃಷಿ ಹಾಗೂ ತೋಟಗಾರಿಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಕೃಷಿ ಇಲಾಖೆಯ ಮೂಲಕ ಕೃಷಿ ಸಹಾಯಕರನ್ನು ಯಾವ ವಿಧಾನದಲ್ಲಿ ಆಯ್ಕೆ ಮಾಡಲಾಗುತ್ತಿದೆ ?

(ಆ) ಗ್ರಾಮಾಕರಣಿಕರ ಆಯ್ಕೆಗೆ ಜಿಲ್ಲಾ ಮಟ್ಟದಲ್ಲಿ ನೇಮಕಾತಿ ಸಮಿತಿ ಇರುವಂತೆ ಕೃಷಿ ಸಹಾಯಕರ ಹುದ್ದೆಗಳಿಗೆ ಆಯ್ಕೆಗಾಗಿ ಸಹಾ ಜಿಲ್ಲಾ ಮಟ್ಟದ ಸಮಿತಿ ತಮಿಳುನಾಡಿನಲ್ಲಿರುವಂತೆ ರಚಿಸುವುದು ಸೂಕ್ತವಲ್ಲವೇ ?

(ಇ) ರಾಜ್ಯದ ಬೇರೆ ಬೇರೆ ಜಿಲ್ಲೆಗಳಲ್ಲಿ ಬೇರೆ ಬೇರೆ ಬೆಳೆಗಳು ಹಾಗೂ ಬೇರೆ ಬೇರೆ ಗ್ರಾಮ ಭಾಷೆಗಳು ಇರುವುದರಿಂದ ರೈತರಿಗೆ ಅನುಕೂಲವಾಗುವಂತೆ ಆಯಾ ಜಿಲ್ಲೆಯವರನ್ನೇ ಕೃಷಿ ಸಹಾಯಕರನ್ನಾಗಿ ಆಯ್ಕೆ ಮಾಡಿ ತರಬೇತಿ ನೀಡಿ ನೇಮಕ ಮಾಡುವುದು ಉತ್ತಮವಲ್ಲವೇ ? ಹಾಗಿದ್ದಲ್ಲಿ ಈ ಬಗ್ಗೆ ಸರಕಾರದವರ ನಿಲುವೇನು ?

ಶ್ರೀ ಬಸವರಾಜ್ ಪಾಟೀಲ್ ಅನ್ವರಿ (ಕೃಷಿ ಮಂತ್ರಿ ತೋಟಗಾರಿಕೆ ರಾಜ್ಯ ಸಚಿವರು).—

(ಅ) ಕೃಷಿ ಇಲಾಖೆಯಲ್ಲಿ ಕೃಷಿ ಸಹಾಯಕರನ್ನು ಇಲಾಖಾ ನೇಮಕಾತಿ ಸಮಿತಿಯು ಮೂಲಕ ನೇರ ನೇಮಕಾತಿ ಆಯ್ಕೆ ನಿಯಮಾವಳಿ ೧೯೭೩ರಂತೆ ಆಯ್ಕೆ ಮಾಡಲಾಗುತ್ತದೆ. ಅವರ ಕೃಷಿ ನಿರ್ದೇಶಕರ ನೇತೃತ್ವದಲ್ಲಿ ರಾಜ್ಯಕ್ಕೆ ಒಂದೇ ಒಂದು ಸಮಿತಿಯು ಇದೆ.

(ಆ) ಸಮಿತಿಗಳನ್ನು ಹೆಚ್ಚಿಸುವ ವಿಚಾರವು ಸರ್ಕಾರದ ಪರಿಶೀಲನೆಯಲ್ಲಿದೆ.

(ಇ) ಸರ್ಕಾರವು ಈ ಸಲಹೆಯನ್ನು ಒಪ್ಪುವುದಿಲ್ಲ.

ಖಾಸಗಿ ವಿದ್ಯಾ ಸಂಸ್ಥೆಗಳಲ್ಲಿ ನಡೆಯುತ್ತಿರುವ ಶೋಷಣೆ

೪೪ ಶ್ರೀ ಆರ್ ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಶಿಕ್ಷಣ ಮಂತ್ರಿಗಳು ಈಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಖಾಸಗಿ ಇಂಜಿನಿಯರಿಂಗ್ ಪಾಲಿಟೆಕ್ನಿಕ್, ಐಟಿಐ, ಟಿಸಿಹೆಚ್, ೧೧ನೇ ದರ್ಜೆ ಕಾಲೇಜು, ಕಿರಿಯ ಕಾಲೇಜ್, ಪ್ರೌಢಶಾಲೆ ಮಾಧ್ಯಮಿಕ ಪ್ರಾಥಮಿಕ ಮಂತ್ರು ನರ್ಸರಿ ಶಾಲೆಗಳ ಸಂಖ್ಯೆ ಎಷ್ಟು?

ಆ) ಸರ್ಕಾರದ ಅನುದಾನ ಹಾಗೂ ಇತರೆ ಅನುದಾನಗಳನ್ನು ಪಡೆಯುತ್ತಿರುವ ಸಂಸ್ಥೆಗಳ ಸಂಖ್ಯೆ ಎಷ್ಟು ಇದರ ವೊತ್ತವೆಷ್ಟು

ಇ) ಸರ್ಕಾರದವರು ನಿಗದಿಪಡಿಸಿರುವುದಕ್ಕಿಂತ ಹೆಚ್ಚಿನ ಸೀಟುಗಳನ್ನು ಪಡೆದು ಸರ್ಕಾರದ ನಿಯಮಾವಳಿಯನ್ನು ಉಲ್ಲಂಘಿಸುತ್ತಿರುವ ಖಾಸಗಿ ವಿದ್ಯಾ ಸಂಸ್ಥೆಗಳ ಸಂಖ್ಯೆ ಎಷ್ಟು.

ಈ) ಸಾರ್ವಜನಿಕರ ಘೋಷಣೆಗಳಿಗೆ ಈಡಾಗಿರುವ ಖಾಸಗಿ ವಿದ್ಯಾ ಸಂಸ್ಥೆಗಳು ಯಾವುವು ಇವುಗಳನ್ನು ಹತೋಟಿಗೆ ತರಲು ಸರ್ಕಾರ ಕೈಗೊಂಡಿರುವ ಕ್ರಮಗಳು ಯಾವುದು ಸರ್ಕಾರದ ಆದೇಶವನ್ನು ಉಲ್ಲಂಘನೆ ಮಾಡಿರುವ ಸಂಸ್ಥೆಗಳ ಮೇಲೆ ಯಾವ ತರಹದ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ

ಶ್ರೀ ಡಿ.ಕೆ ವೆಂಜುನಾಥ್ (ಶಿಕ್ಷಣ ಮಂತ್ರಿಗಳು).—

	ಇಂಜಿನಿಯರಿಂಗ್	ಪಾಲಿಟೆಕ್ನಿಕ್	ಟಿಸಿಹೆಚ್	ಸಿಪಿಇಡಿ	ಬಿ.ಇಡಿ	ಡಿನೇ ದರ್ಜೆ ಕಾಲೇಜ್	ಕಿರಿಯ ಕಾಲೇಜ್	ಪ್ರೌಢ ಶಾಲೆ	ಮಾದ್ಯಮಿಕಶಾಲೆ	ಪ್ರಾಥಮಿಕ ಶಾಲೆ	ನರ್ಸರಿ ಶಾಲೆ
ಅ)	೨೭ ೮	೧೦೮ ೭	೭೭ ೪೦	೧೧೪ ೩	೪೭ ೧೪	೩೯೪ ೨೧೦	೪೮೯ ೧೧೯	೨೬೫೭ ೧೪೧೬		೫೯೭೦ ೧೯೪೫	೧೩೭೩ ೫೭೭
ಆ)	೩೪೨.೦೦ ಲಕ್ಷ	೭೬.೦೦ ಲಕ್ಷ	೬೦.೦೦ ಲಕ್ಷ	೧.೬೫ ಲಕ್ಷ	೫೫೦.೦೦ ಲಕ್ಷ		೩೪೦.೫೦ ಲಕ್ಷ	೪೭೨೧.೫೮ ಲಕ್ಷ		೨೦೦೦.೦೦ ಲಕ್ಷ	೮೬.೫೦ ಲಕ್ಷ
ಇ)	೧೨	—	—	—	—	—	—	—		—	—

ಈ) ಇಲ್ಲ.

ಹತೋಟಿಗೆ ತರುವಲ್ಲಿ ಮುಂದಾಗಿ ಎಚ್ಚರಿಕೆ ನೋಟಿಸ್ ಕೊಡಲಾಗುವುದು. ಶಿಕ್ಷಣ ಸಂಸ್ಥೆಗಳು ಇದಕ್ಕೂ ಮಾನ್ಯತೆ ಕೊಡದಿದ್ದಲ್ಲಿ ಸದರಿ ಶಾಲೆಗೆ ಇಲಾಖೆಯಿಂದ ಕೊಡಲಾದ ಮಾನ್ಯತೆಯನ್ನು ಹಿಂದಕ್ಕೆ ಪಡೆಯಲಾಗುವುದು, ಇಂತಹ ಕ್ರಮಕ್ಕೆ ಅನುದಾನ ಸಂಹಿತೆಗಳಲ್ಲಿ ಅವಕಾಶವಿರುತ್ತೆ.